

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ತುಂಬಿ ಹರಿದ 'ತುಂಗಭದ್ರೆ'ಯರು

ಏನಿದು ವಿಚಿತ್ರ! ಇನ್ನೂ ಮುಂಗಾರು ಮಳೆಯೇ ಆಗಿಲ್ಲ. ತುಂಗಭದ್ರೆ ತುಂಬಿ ಹರಿಯಲು ಹೇಗೆ ಸಾಧ್ಯ ಎಂದು ಸೋಜಿಗವೇ? ಸ್ವಲ್ಪ ತಾಳಿ. ನಾವೀಗ ಬರೆಯಹೊರಟಿರುವುದು ತುಂಗಾ ಮತ್ತು ಭದ್ರಾ ನದಿಗಳನ್ನು ಕುರಿತು ಅಲ್ಲ. ಕರ್ನಾಟಕದ ಹೃದಯಭಾಗದಲ್ಲಿರುವ ದಾವಣಗೆರೆ ಮಹಾನಗರದಲ್ಲಿ ತುಂಗಭದ್ರೆಯರಂತೆ ಒಂದಾಗಿ ಸಾಮಾಜಿಕ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಈರ್ವರು ವೃದ್ಧ ಸಹೋದರಿಯರನ್ನು ಕುರಿತು. ಒಬ್ಬರು ಬಾಪೂಜಿ ಮೆಡಿಕಲ್ ಕಾಲೇಜಿನ ಹೆಸರಾಂತ ಮಕ್ಕಳ ವೈದ್ಯೆ ಡಾ. ನಿರ್ಮಲಾ ಕೇಸರಿ; ಮತ್ತೊಬ್ಬರು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ಕಟ್ಟುನಿಟ್ಟಾದ ಆಡಳಿತ ನಡೆಸಿ ನಿವೃತ್ತಿ ಹೊಂದಿದ್ದ ಅವರ ಅಕ್ಕ ಡಾ. ಲೀಲಾ ಕೇಸರಿ. ಒಡಹುಟ್ಟಿದ ಈ ಅಕ್ಕತಂಗಿಯರ ದೇಹ ಎರಡಾದರೂ ಆತ್ಮ ಒಂದೇ. ಪಕ್ಕದ ಹರಿಹರದಲ್ಲಿ ಹರಿಯುತ್ತಿರುವ ತುಂಗಭದ್ರೆಯರಂತೆ! **'ಪಿಬಂತಿ ನದ್ಯಃ ಸ್ವಯಮೇವ ನಾಂಭಃ'** (ನದಿಗಳು ತಮ್ಮ ನೀರನ್ನು ತಾವೇ ಕುಡಿಯುವುದಿಲ್ಲ) ಎಂಬ ಸಂಸ್ಕೃತ ಸೂಕ್ತಿಯಂತೆ ಇಬ್ಬರೂ ಸಹೋದರಿಯರು ತಮ್ಮ ವೈಯಕ್ತಿಕ ಸುಖಕ್ಕಿಂತ ಬೇರೆಯವರ ಸುಖಕ್ಕಾಗಿ ತಮ್ಮ ಜೀವನವನ್ನು ಸವೆಸಿದವರು. ದಾವಣಗೆರೆ ಮತ್ತು ಸುತ್ತಮುತ್ತಲ ಜಿಲ್ಲೆಗಳ ಲಕ್ಷಾಂತರ ತಾಯಂದಿರ ಒಡಲ ಕುಡಿ ಚಿಗುರೊಡೆಯುವಂತೆ ಮಾಡಿದ ಮಹಾತಾಯಿ ಡಾ. ನಿರ್ಮಲಾ ಕೇಸರಿ; ಸಾಂಸಾರಿಕ ಜೀವನದಲ್ಲಿ ನೊಂದ ಮಹಿಳೆಯರಿಗೆ 'ಸಾಂತ್ವನ'ದ ಸಿಂಚನವನ್ನು ಮಾಡುತ್ತಿದ್ದವರು ಅವರ ಅಕ್ಕ ಡಾ. ಲೀಲಾ ಕೇಸರಿಯವರು.

ವೈದ್ಯಕೀಯ ವೃತ್ತಿಯನ್ನು ವ್ಯಾಪಾರದ ಮಟ್ಟಕ್ಕಿಳಿಸಿ ರೋಗಿಯ ಬದುಕಿನೊಂದಿಗೆ ಚೆಲ್ಲಾಟವಾಡುವ ವೈದ್ಯರೇ ತುಂಬಿರುವ ಈ ಕಾಲದಲ್ಲಿ ಡಾ। ನಿರ್ಮಲಾ ಕೇಸರಿಯವರದು ಧವಳಗಿರಿಯ ಹಿಮದಂತೆ ನಿರ್ಮಲ ವ್ಯಕ್ತಿತ್ವ. ಕಾಂಚಾಣದ ಝಣತ್ಕಾರಕ್ಕೆ ಮರುಳಾಗದೆ ರೋಗಿಗಳ ಸೇವೆಗೆ ಅರ್ಪಿಸಿಕೊಂಡಿದ್ದ ನಿಸ್ವಾರ್ಥ ಹಿರಿಯ ವೈದ್ಯೆ ಅವರು. ಅವರ ಕೈಕೆಳಗೆ ತಯಾರಾದ ಮಕ್ಕಳ ತಜ್ಞರನೇಕರು ದೇಶವಿದೇಶಗಳಲ್ಲಿದ್ದಾರೆ. ಅವರು ಕಾಲೇಜಿನಲ್ಲಿ ಕೇವಲ ಪಾಠವನ್ನಷ್ಟೇ ಮಾಡಲಿಲ್ಲ; ಇತರೆಯವರ ಮಕ್ಕಳನ್ನು ತಮ್ಮ ಮಕ್ಕಳಂತೆ ಶುಶ್ರೂಷೆ ಮಾಡುವ ಮನೋಧರ್ಮವುಳ್ಳ ಒಂದು ಯುವ ವೈದ್ಯಕೀಯ ಪಡೆಯನ್ನೇ ನಿರ್ಮಾಣ ಮಾಡಿದರು. ವೈದ್ಯಕೀಯ ವೃತ್ತಿ ಅವರಿಗೆ ಜೀವನೋಪಾಯದ ಒಂದು ವೃತ್ತಿಯಾಗಿರಲಿಲ್ಲ; ಆತ್ಮತೃಪ್ತಿಯನ್ನು ನೀಡುವ ಪ್ರವೃತ್ತಿಯಾಗಿತ್ತು.

ಇಬ್ಬರೂ ಕೇಸರಿ ಸೋದರಿಯರ ಆದರ್ಶ ಬದುಕಿನ ಹಿಂದೆ ಇದ್ದವರು ಕಳೆದ ಶತಮಾನದಲ್ಲಿ ಧಾರವಾಡದಲ್ಲಿ ವಕೀಲರಾಗಿ ಸಮಾಜ ಸೇವೆಗೆ ಹೆಸರುವಾಸಿಯಾಗಿದ್ದ ಅವರ ತಂದೆ ಮಹದೇವ ಕೇಸರಿಯವರು. ಮೈಸೂರು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಹಿಂದುಳಿದ ವರ್ಗದವರ ಏಳಿಗೆಗಾಗಿ ಅಹರ್ನಿಶಿ ಶ್ರಮಿಸಿದ ಮೈಸೂರು ಬಸವಯ್ಯನವರ ಅಳಿಯಂದಿರು. ಕಡುಬಡತನದ ಮನೆತನದಲ್ಲಿ ಹುಟ್ಟಿದ ಕೇಸರಿ ವಕೀಲರು ಬಡವರಿಗೆ ಬೆನ್ನೆಲುಬಾಗಿ ನಿಂತು ಬದುಕು ಸವೆಸಿದವರು.

ಮಹದೇವ ಕೇಸರಿ ಎಂದರೆ ಪ್ರಾಮಾಣಿಕತೆಗೆ ಮತ್ತೊಂದು ಹೆಸರು. ಅವರ ಮೂರನೆಯ ಮಗಳಾದ 74 ವರ್ಷ ವಯೋಮಾನದ ಮಾಲತಿ ಕೇಸರಿ ಕರ್ನಾಟಕದ ಮೊದಲ ಮಹಿಳಾ ಎಂಜಿನಿಯರ್. ಈಗ ಅವರು ಅಮೇರಿಕೆಯಲ್ಲಿ ನೆಲೆಸಿದ್ದಾರೆ. ಅವರು 8 ವರ್ಷದ ಬಾಲಕಿಯಾಗಿದ್ದಾಗ ತಂದೆಯೊಂದಿಗೆ ಗಡಿಯಾರದ ಅಂಗಡಿಗೆ ಹೋಗಿದ್ದರು. ಮನೆಗೆ ಹಿಂದಿರುಗಿದಾಗ ಆಕೆಯ ಕೈಯಲ್ಲಿ ಒಂದು ಸಣ್ಣ ಸ್ಪ್ರಿಂಗಿನ ತುಂಡಿತ್ತು. ಕೇಸರಿಯವರು ಕೇಳಿದರು 'ಅಂಗಡಿಯವರನ್ನು ಕೇಳಿ ತಂದೆಯಾ?' 'ಇಲ್ಲ, ಅಲ್ಲಿ ಬಿದ್ದಿತ್ತು, ಎತ್ತಿಕೊಂಡು ಬಂದೆ' ಎಂಬ ಉತ್ತರ ಬಂತು. 'ಅಲ್ಲಿ ಏನೇ ಇರಲಿ, ಅದು ಅಂಗಡಿಯವರದು. ನೀನು ಅಂಗಡಿಯವರನ್ನು ಕೇಳದೆ ತಂದದ್ದು ತಪ್ಪು. ನಡಿ, ಅಂಗಡಿಯವರ ಕ್ಷಮೆ ಕೇಳು' ಎಂದು ಅಂಗಡಿಗೆ ಕರೆದುಕೊಂಡು ಹೋದರು. ಅಂಗಡಿಯವರು 'ವಕೀಲರೇ ಆ ಹುಡುಗಿ ಏನೂ ತಪ್ಪು ಮಾಡಿಲ್ಲ. ಆ ತುಂಡು ನಮಗೆ ಉಪಯೋಗವಿಲ್ಲ ಎಂದು ಎಸೆದಿದ್ದೆವು' ಎಂದು ಹೇಳಿ ಸಮಾಧಾನಪಡಿಸಿ ಕಳುಹಿಸಿದರು.

ಇದೇ ರೀತಿ, ತಾವೇ ಗೆಳೆಯರೊಡಗೂಡಿ ಸ್ಥಾಪಿಸಿದ ಸ್ವರಾಜ್ ಬ್ಯಾಂಕಿನಲ್ಲಿ ಮಗಳು ನಿರ್ಮಲಾ ಒಂದು ಪೆನ್ಸಿಲ್ ಮತ್ತು ರಬ್ಬರನ್ನು ತಂದಾಗಲಂತೂ ಎರಡು ಏಟನ್ನೇ ಕೊಟ್ಟು ಬ್ಯಾಂಕಿಗೆ ಎಳೆದುಕೊಂಡು ಹೋದರು. ಬ್ಯಾಂಕಿನ ಅಧೀಕ್ಷಕರು 'ಆಕೆ ನನ್ನನ್ನು ಕೇಳಿಯೇ ತೆಗೆದುಕೊಂಡಿದ್ದಾಳೆ, ನಾನೇ ಕೊಟ್ಟೆ, ಅವಳು ಕದ್ದು ತಂದಿಲ್ಲ' ಎಂದಾಗಲೂ 'ನೀವು ಈ ರೀತಿ ಬ್ಯಾಂಕಿನ ಸಾಮಗ್ರಿಗಳನ್ನು ಕೊಡುವುದು ತಪ್ಪು. ಇನ್ನು ಮೇಲೆ ನನ್ನ ಮಕ್ಕಳಿಗೆ ಬ್ಯಾಂಕಿನ ವಸ್ತುಗಳನ್ನು ಕೊಡಬೇಡಿರಿ' ಎಂದೇ ಹೇಳಿದರು. ಒಮ್ಮೆ ಮಕ್ಕಳು ಆಡುವ ಸ್ಥಳದಲ್ಲಿ ಅದೇ ಮಗಳು ನಿರ್ಮಲಾಗೆ ಒಂದು ಕೈಗಡಿಯಾರ ಸಿಕ್ಕಿತು. ಅದನ್ನು ಖುಷಿಯಿಂದ ಕೈಗೆ ಕಟ್ಟಿಕೊಳ್ಳುತ್ತಿದ್ದ ಮಗಳನ್ನು ಗಮನಿಸಿದ ಕೇಸರಿಯವರು ಆ ಕೈಗಡಿಯಾರವನ್ನು ಬಳಸಲು ಮಗಳಿಗೆ ಅವಕಾಶ ಕೊಡಲಿಲ್ಲ. ಅದು ಬೇರೆಯವರ ವಸ್ತು, ನೀನು ಕದ್ದು ತಂದಿಲ್ಲ, ನಿಜ. ಆದರೆ ಇನ್ನೊಬ್ಬರ ವಸ್ತುವನ್ನು ಇಟ್ಟುಕೊಳ್ಳುವುದು ಸರಿಯಲ್ಲ ಎಂದು ಮಗಳಿಗೆ ತಿಳಿಹೇಳಿದರು. ಅಲ್ಲದೆ ಕೈಗಡಿಯಾರ ಸಿಕ್ಕಿರುವ ಸಂಗತಿಯನ್ನು ಪತ್ರಿಕೆಯಲ್ಲಿ ಜಾಹೀರಾತು ನೀಡಿ ಅದರ ಮಾಲೀಕರನ್ನು ಪತ್ತೆಹಚ್ಚಿ ಕೊಟ್ಟರು. ಇವೆಲ್ಲ

- 2 -

ಮಹದೇವ ಕೇಸರಿಯವರು ತಮ್ಮ ಮಕ್ಕಳ ಮನಸ್ಸಿನಲ್ಲಿ ಎಳೆಯ ವಯಸ್ಸಿನಲ್ಲಿಯೇ ಹೇಗೆ ಪ್ರಾಮಾಣಿಕತೆಯ ಅಂಕುರಾರ್ಪಣ ಮಾಡಿದರು ಎಂಬುದರ ದ್ಯೋತಕವಾಗಿವೆ.

ವೈದ್ಯಕೀಯಶಾಸ್ತ್ರದ ಪ್ರಕಾರ ಮೆದುಳಿಗಿರುವ ಅದ್ಭುತವಾದ ಸ್ಮರಣಶಕ್ತಿಯಲ್ಲಿ ಮುಖ್ಯವಾಗಿ ಮೂರು ಸಂಗತಿಗಳಿರುತ್ತವೆ: 1) Recording, 2) Retaining, 3) Retrieving ಅಂದರೆ ಗ್ರಹಿಕೆ, ಸಂಗ್ರಹಣೆ ಮತ್ತು ಸಂಸ್ಮರಣೆ. ಇವುಗಳನ್ನು ಸಂಕ್ಷಿಪ್ತವಾಗಿ "the three R's" ಎಂದು ಕರೆಯುತ್ತಾರೆ. ಮೆದುಳಿನಲ್ಲಿ ಪಂಚೇಂದ್ರಿಯಗಳ ಮೂಲಕ ಉಂಟಾಗುವ ಜ್ಞಾನವೇ ಗ್ರಹಿಕೆ, ಅದನ್ನು ದೀರ್ಘಕಾಲ ಶೇಖರಿಸಿಟ್ಟುಕೊಳ್ಳುವುದೇ ಸಂಗ್ರಹಣೆ, ಹಾಗೆ ಸಂಗ್ರಹಿಸಿಟ್ಟುಕೊಂಡ ಮಾಹಿತಿಯನ್ನು ಬೇಕೆನಿಸಿದಾಗ ನೆನಪಿಸಿಕೊಳ್ಳುವುದೇ ಸ್ಮರಣೆ. ಇವುಗಳನ್ನು ಸಾವಿರಾರು ವರ್ಷಗಳ ಹಿಂದೆ ನಮ್ಮ ಪ್ರಾಚೀನ ಋಷಿಮುನಿಗಳು ಉಪನಿಷತ್ತಿನಲ್ಲಿ ಹೇಳಿರುವ "ಶ್ರವಣ, ಮನನ, ನಿಧಿಧ್ಯಾಸನ"ಗಳಿಗೆ ಹೋಲಿಸಬಹುದು. ಮನುಷ್ಯನಿಗೆ ವಯಸ್ಸಾದಂತೆ ಇವು ಮೂರೂ ಕ್ಷೀಣಿಸುತ್ತಾ ಹೋಗುತ್ತವೆ. ಕೆಲವೊಮ್ಮೆ ಮೆದುಳಿನ ಈ ಮೂರೂ ಶಕ್ತಿಗಳು ನಿಷ್ಕ್ರಿಯಗೊಂಡು ಮನುಷ್ಯ ಯಾರನ್ನೂ ಗುರುತಿಸದಂತೆ ಆಗುತ್ತದೆ. ಇದಕ್ಕೆ ವೈದ್ಯಕೀಯ ಶಾಸ್ತ್ರದಲ್ಲಿ Alzimer's disease ಎಂದು ಕರೆಯುತ್ತಾರೆ. ಈ ವಿಚಾರವಾಗಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಉದ್ಬೋಧಕವಾದ ಉಪನ್ಯಾಸವನ್ನು ನೀಡುತ್ತಿದ್ದ ಡಾ. ನಿರ್ಮಲಾ ಕೇಸರಿಯವರು ಇಳಿ ವಯಸ್ಸಿನಲ್ಲಿ ಈ ಖಾಯಿಲೆಗೆ ಉದಾಹರಣೆಯಾಗಿ ಆಸ್ಪತ್ರೆ ಸೇರುವಂತಾಗಿರುವುದು ಎಂತಹ ಕ್ರೂರ ವಿಧಿವಿಲಾಸ! ದಾವಣಗೆರೆಯ ಹೆಸರಾಂತ ಮಕ್ಕಳ ವೈದ್ಯೆಯಾಗಿದ್ದ ಅವರ ಮುಖದಲ್ಲೀಗ ಮಕ್ಕಳ ಮುಗ್ಧತೆ! ನೋಡಲು ಆರೋಗ್ಯವಾಗಿಯೇ ಇದ್ದಾರೆಂದು ಕಂಡರೂ ಯಾರನ್ನೂ ಗುರುತಿಸಲು ಸಾಧ್ಯವಾಗದ ದಯನೀಯ ಸ್ಥಿತಿಯಲ್ಲಿ ಅವರಿದ್ದಾರೆ. ಅವರನ್ನು ಹತ್ತಿರದಿಂದ ಬಲ್ಲವರಿಗೆ ನೋಡಲು ಹೋದಾಗ ಆಗುವ ವೇದನೆ ಅಪಾರ.

ಇಳಿವಯಸ್ಸಿನಲ್ಲಿ ಶರೀರ ಕುಗ್ಗಿದ್ದರೂ ಗಟ್ಟಿ ಮನಸ್ಸಿನ ಅವರ ಅಕ್ಕ ಲೀಲಾ ಕೇಸರಿಯವರಿಗೆ ಬಲವಾದ ಒಂದು ಕೊರಗು. ಅದೇನೆಂದರೆ ಬಚ್ಚಲಮನೆಯಲ್ಲಿ ತಮಗೆ ನೆರವಾಗಲು ಬಂದ ತಂಗಿ ಡಾ। ನಿರ್ಮಲಾ ಕೇಸರಿ ಆಕಸ್ಮಿಕವಾಗಿ ಜಾರಿ ಬಿದ್ದು ತಲೆಗೆ ಪೆಟ್ಟಾಗಿ ತನ್ನಿಂದ ತನ್ನ ತಂಗಿಗೆ ಹೀಗಾಯಿತಲ್ಲಾ ಎಂಬ ಅಪರಾಧಿ ಪ್ರಜ್ಞೆ. ತಂಗಿಯನ್ನು ತಾಯಿಯೋಪಾದಿಯಲ್ಲಿ ಆರೈಕೆ ಮಾಡುತ್ತಿದ್ದ ಅವರು ಅದೇ ಕೊರಗಿನಲ್ಲಿ ರಾತ್ರಿ ಹೊತ್ತು ಮಲಗಿದ್ದಾಗ ಮಂಚದ ಮೇಲಿಂದ ಬಿದ್ದು ದೇಹಾರೋಗ್ಯ ವಿಷಮಿಸಿ ಒಂದೆರಡು ದಿನಗಳಲ್ಲಿಯೇ ಕೊನೆಯುಸಿರೆಳೆದರು. ದೇವರ ಮುಂದೆ ಇಡುವ ಜೋಡಿದೀಪಗಳಂತೆ ಸಮಾಜ ಸೇವಾಕಾರ್ಯಗಳಲ್ಲಿ ನಿರತವಾಗಿದ್ದ ಎರಡು ದೀಪಗಳಲ್ಲಿ ಒಂದು ದೀಪ ಕಳೆದ ತಿಂಗಳು ಆರಿಹೋಯಿತು. ಅಕ್ಕಮಹಾದೇವಿ ಮಹಿಳಾ ಸಮಾಜದ ಕಲ್ಯಾಣ ಮಂಟಪದಲ್ಲಿ ಅವರ ಸಂಸ್ಮರಣಾ ಸಭೆ ಏರ್ಪಡಾಗಿತ್ತು. ಲೀಲಾ ಕೇಸರಿಯವರ ಹೃದಯದ ನಾಡಿ ಮಿಡಿತ ನಿಂತಿದ್ದರೂ ಅವರು ಕೊಡುಗೆಯಾಗಿ ನೀಡಿದ್ದ ಗಡಿಯಾರ ಮಾತ್ರ ವೇದಿಕೆಯ ಹಿಂಭಾಗದ ಗೋಡೆಯ ಮೇಲೆ 'ಟಿಕ್ ಟಿಕ್' ಎಂದು ನಡೆಯುತ್ತಿತ್ತು!

21.3.2013

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑